# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿಃ ಬೇಲೂರು.

ಉಪಸ್ಥಿತರು
ಶ್ರೀ ನಾಗೇಶ ಸಿ., ಬಿ.ಎ.ಎಲ್., ಎಲ್ಎಲ್.ಬಿ.,
ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಬೇಲೂರು

## ಃಕ್ರಿಮಿನಲ್ ಮಿಸ್.ಸಂಖ್ಯೆಃ 80/2019

ದಿನಾಂಕಃ 05ನೇ ಮಾರ್ಚ್ ಮಾಹೆ 2021 ನೇ ಇಸವಿ

ಅರ್ಜಿದಾರರು ಃ 1) ಶ್ವೇತಾ ಕೋಂ ಶ್ರೀನಾಥ್,
32 ವರ್ಷ ವಯಸ್ಸು,
2) ಅಕ್ಷಯ್ ಬಿನ್ ಶ್ರೀನಾಥ್,
10 ವರ್ಷ ವಯಸ್ಸು,
3) ಐಶ್ವರ್ಯ ಬಿನ್ ಶ್ರೀನಾಥ್,
7 ವರ್ಷ ವಯಸ್ಸು,

ಎಲ್ಲರ ವಾಸ ದೊಡ್ಡಕೋಡಿಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ, ಬೇಲೂರು ತಾಲ್ಲೂಕು

(2 ರಿಂದ 3ನೇ ಅರ್ಜಿದಾರರು ಮೈನರ್ ಆಗಿದ್ದು,
ಅವರ ಪರವಾಗಿ ಅವರ ತಾಯಿ 1ನೇ
ಅರ್ಜಿದಾರರು ಪ್ರತಿನಿಧಿಸಿರುತ್ತಾರೆ.

(ಶ್ರೀ ಕೆ.ಎಸ್. ಪಂಚಾಕ್ಷರಿ, ವಕೀಲರು ಪ್ರತಿನಿಧಿಸುತ್ತಾರೆ)

ವಿರುದ್ಧ

ಎದುರರ್ಜಿದಾರರುಃ ಶ್ರೀನಾಥ್ ಬಿನ್ ಹನುಮಯ್ಯ,
35 ವರ್ಷ ವಯಸ್ಸು,
ದೊಡ್ಡಕೋಡಿಹಳ್ಳಿ ಗ್ರಾಮ,
ಹಳೇಬೀಡು ಹೋಬಳಿ,
ಬೇಲೂರು ತಾಲ್ಲೂಕು

(ಶ್ರೀ ಬಿ.ಎಸ್.ಜಿ. ಸ್ವಾಮಿ, ವಕೀಲರು ಪ್ರತಿನಿಧಿಸುತ್ತಾರೆ)

*********

ಃಮಧ್ಯಂತರ ಅರ್ಜಿಗಳ ಪಕ್ಷಕಾರರುಃ

ಅರ್ಜಿದಾರರು : ಶ್ವೇತಾ ಮತ್ತು ಇತರರು

ವಿರುದ್ಧ

ಎದುರುದಾರನು : ಶ್ರೀನಾಥ್

ಃಃ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕಲಂ.20(1)(ಡಿ) ಹಾಗೂ ಕಲಂ 18 (ಎಬಿಸಿ) ರ ರೀತ್ಯಾ ಮಧ್ಯಂತರ ಅರ್ಜಿಗಳ ರ ಮೇಲೆ ಆದೇಶ ಃಃ

ಈ ಅರ್ಜಿಯಲ್ಲಿ ಅರ್ಜಿದಾರರು ಎದುರುದಾರನ ವಿರುದ್ದ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕಲಂ.20(1)(ಡಿ) ರಡಿ ಜೀವನಾಂಶ ಕೋರಿ ಮಧ್ಯಂತರ ಅರ್ಜಿನ್ನು ಸಲ್ಲಿಸಿದ್ದು, ಆ ಪ್ರಕಾರ ತಿಂಗಳಿಗೆ ರೂ.50,000-00 ರಂತೆ ಜೀವನ ಭತ್ಯೆಯನ್ನು ಪಾವತಿ ಮಾಡುವಂತೆ ಹಾಗೂ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕಲಂ 18 (ಎಬಿಸಿ) ರಡಿ ಸಲ್ಲಿಸಿರುವ ಅರ್ಜಿಯಂತೆ ಎದುರುದಾರನು ಅರ್ಜಿದಾರರಿಗೆ ಮತ್ತು ಸಹೋದರನಿಗೆ ಯಾವುದೇ ರೀತಿಯಿಂದಲೂ ಹಿಂಸೆ-ಕಿರುಕುಳ, ದೌರ್ಜನ್ಯ ನೀಡದಂತೆ, ಗಲಾಟೆ ಮಾಡದಂತೆ ಅರ್ಜಿದಾರಿಗೆ ಹಳೇಬೀಡು ಪೋಲೀಸರು ರಕ್ಷಣೆ ನೀಡುವಂತೆ ರಕ್ಷಣಾ ಆದೇಶ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ.

2. ಪ್ರಸ್ತುತ ಅರ್ಜಿಯ ಸಾರಾಂಶ ಏನೆಂದರೆಃ-

1ನೇ ಅರ್ಜಿದಾರು ಮತ್ತು ಎದುರುದಾರನ ವಿವಾಹವು ದಿನಾಂಃ 21-12-2007 ರಂದು ಅರಸೀಕೆರೆ ತಾಲ್ಲೂಕು, ಚಿಕ್ಕತಿರುಪತಿಯ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ಗುರು-ಹಿರಿಯರ ಸಮ್ಮುಖದಲ್ಲಿ ನೆರವೇರಿರುತ್ತದೆ. ವಿವಾಹದ ನಂತರ 1ನೇ ಅರ್ಜಿದಾರರು ಎದುರುದಾರನೊಂದಿಗೆ ದೊಡ್ಡಕೋಡಿಹಳ್ಳಿ ಗ್ರಾಮದ ಎದುರುದಾರರ ಮನೆಯಲ್ಲಿ ದಾಂಪತ್ಯ ಜೀವನ ನಡೆಸಿದ್ದು, ನಂತರ ಎದುರುದಾರರು ಬೇಕರಿ ವೃತ್ತಿ ಮಾಡುತ್ತಿದ್ದ ಬೆಳಗಾಂ ನಗರಕ್ಕೆ 1ನೇ ಅರ್ಜಿದಾರರನ್ನು ಕರೆದುಕೊಂಡು ಹೋಗಿ 6 ತಿಂಗಳು ದಾಂಪತ್ಯ ಜೀವನ ನಡೆಸಿ, ನಂತರ ಪುನಃ ದೊಡ್ಡಕೋಡಿಹಳ್ಳಿ ಗ್ರಾಮದ ಮನೆಗೆ ಕರೆದುಕೊಂಡು ಬಂದು ಸುಮಾರು 6 ವರ್ಷಗಳ ಕಾಲ ದಾಂಪತ್ಯ ಜೀವನ ನಡೆಸಿದ್ದು, ಸದರಿ 1ನೇ ಅರ್ಜಿದಾರರ ಮತ್ತು ಎದುರುದಾರರ ದಾಂಪತ್ಯ

ಫಲವಾಗಿ 2 ಮತ್ತು 3ನೇ ಅರ್ಜಿದಾರರು ಜನಿಸಿರುತ್ತಾರೆ. ನಂತರದಲ್ಲಿ ಎದುರುದಾರರು 1ನೇ ಅರ್ಜಿದಾರರೊಂದಿಗೆ ಸಣ್ಣಪುಟ್ಟ ವಿಷಯಗಳಿಗೆ ಜಗಳ ತೆಗೆಯುವುದು ಮದ್ಯಪಾನ, ಅನೈತಿಕ ಸಂಬಂಧ ಇತ್ಯಾದಿ ದುಷ್ಚಟಗಳಿಗೆ ಬಲಿಯಾಗಿ 1ನೇ ಅರ್ಜಿದಾರರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ, ಕಿರುಕುಳ ಕೊಡಲಾರಂಭಿಸಿರುತ್ತಾರೆ. ಎದುರುದಾರರ ಈ ಮಾನಸಿಕ ಮತ್ತು ದೈಹಿಕ ಹಿಂಸೆ-ಕಿರುಕುಳಗಳನ್ನು 1ನೇ ಅರ್ಜಿದಾರರು ಎಷ್ಟೇ ಸಹಿಸಿಕೊಂಡು ಜೀವನ ನಡೆಸಿದರೂ ಎದರುದಾರರು ಪ್ರತಿದಿನ ಮದ್ಯಪಾನ ಮಾಡಿಕೊಂಡು ಬಂದು ಅನಾಶವ್ಯಕವಾಗಿ ಜಗಳ ತೆಗೆದು, 1ನೇ ಅರ್ಜಿದಾರರಿಗೆ ಅವಾಚ್ಯಶಬ್ಧಗಳಿಂದ ಬೈಯುವುದು, ದೈಹಿಕ ಹಲ್ಲೆ ಮಾಡುವುದನ್ನು ಮಾಡಿರುತ್ತಾರೆ. ಅಲ್ಲದೇ ಎದುರುದಾರರು 1ನೇ ಅರ್ಜಿದಾರರ ಮತ್ತು ತಮ್ಮ ಇಬ್ಬರು ಮಕ್ಕಳಾದ 2 ಮತ್ತು 3ನೇ ಅರ್ಜಿದಾರರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳದೇ ತಾತ್ಸಾರ-ನಿರ್ಲಕ್ಷ್ಯ ಮಾಡಿ, ಅರ್ಜಿದಾರರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ-ಕಿರುಕುಳ ನೀಡಿ ದೌರ್ಜನ್ಯವೆಸಗಿ ಅರ್ಜಿದಾರರನ್ನು ಮತ್ತು ಮಕ್ಕಳನ್ನು ಈಗ್ಗೆ 2 ವರ್ಷಗಳ ಹಿಂದೆ ಹೊರಹಾಕಿರುತ್ತಾರೆ. ನಂತರ 1ನೇ ಅರ್ಜಿದಾರರ ಪೋಷಕರು, ಹಿತೈಷಿಗಳು, ಸಂಬಂಧಿಗಳು ಎಷ್ಟೇ ರಾಜಿ ಸಂಧಾನ ಮಾಡಿದರೂ ಎದುರುದಾರರು ಯಾರ ಮಾತಿಗೂ ಬೆಲೆ ಕೊಡದೇ, ಅರ್ಜಿದಾರರನ್ನು ತಿರಸ್ಕರಿಸಿ, ರಾಜಿ-ಪಂಚಾಯಿತಿ ಪ್ರಯತ್ನಗಳನ್ನು ವಿಫಲಗೊಳಿಸಿದಾಗ, 1ನೇ ಅರ್ಜಿದಾರರು ಪೋಲೀಸ್ ಠಾಣೆಗೆ ದೂರು ನೀಡಿದರೂ ಪ್ರಯೋಜನವಾಗದಿದ್ದರಿಂದ 1ನೇ ಅರ್ಜಿದಾರರು ತಮ್ಮ ಮಕ್ಕಳಾದ 2 ಮತ್ತು 3ನೇ ಅರ್ಜಿದಾರರೊಂದಿಗೆ ತಮ್ಮ ತವರು ಮನೆಯಲ್ಲಿಯೇ ವಾಸವಾಗಿರುತ್ತಾರೆ. ಅಲ್ಲದೇ ಎದುರುದಾರರು ಗಂಡಃತಂದೆಯಾಗಿ ಇದುವರೆವಿಗೂ 1ನೇ ಅರ್ಜಿದಾರರ ಮತ್ತು ತಮ್ಮ ಮಕ್ಕಳಾದ 2 ಮತ್ತು 3ನೇ ಅರ್ಜಿದಾರರ ಪಾಲನೆ-ಪೋಷಣೆ, ಯೋಗಕ್ಷೇಮ, ವಿದ್ಯಾಭ್ಯಾಸ ಔಷಧೋಪಚಾರ ವೆಚ್ಚ ಇತ್ಯಾಗಳ ಯಾವುದೇ ಕರ್ತವ್ಯ ನಿರ್ವಹಿಸಿರುವುದಿಲ್ಲ.

3. ಹೀಗಿರುವಾಗ ಅರ್ಜಿದಾರರು ಮುಂದುವರೆದು ತನ್ನ ಅರ್ಜಿಯಲ್ಲಿ ಹೇಳುವುದೇನೆಂದರೆ, 1ನೇ ಅರ್ಜಿದಾರರ ಮತ್ತು ಎದುರುದಾರರ ಮಗುವಾದ 3ನೇ ಅರ್ಜಿದಾರರು ಐಶ್ವರ್ಯಳಿಗೆ ಹುಟ್ಟಿನಿಂದಲೂ THASASSEMIA MAJOR ಎಂಬ

ಗುರುತರವಾದ ಕಾಯಿಲೆ ಇದ್ದು, ಸದರಿ 3ನೇ ಅರ್ಜಿದಾರಳಾದ ಐಶ್ವರ್ಯಳಿಗೆ ಪ್ರತಿ 20 ದಿನಗಳಿಗೊಮ್ಮೆ ರಕ್ತ ಬದಲಾವಣೆ ಮಾಡಲೇಬೇಕಾಗಿದ್ದು, ಸದರಿ ಕಾಯಿಲೆಯ ಚಿಕಿತ್ಸೆಯನ್ನು ಬೆಂಗಳೂರು INDIRA GANDHI INSTITUTE OF CHILD HEALTH ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬೇಕಿದ್ದು, ಸದರಿ ಚಿಕಿತ್ಸೆಗಾಗಿ ಪ್ರತಿ ವರ್ಷಕ್ಕೆ ರೂ.27,000-00 ಖರ್ಚಾಗುತ್ತಿರುತ್ತದೆ. ಅಲ್ಲದೇ ಸದರಿ ಚಿಕಿತ್ಸೆಗಾಗಿ ಸುಮಾರು 10 ರಿಂದಾ 12 ಲಕ್ಷ ರೂ.ಗಳ ಅವಶ್ಯಕತೆ ಇರುತ್ತದೆ ಎಂದು ವೈದ್ಯರು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಮಗುವಿನ ಚಿಕಿತ್ಸೆಗಾಗಿ ಎದುರುದಾರರು ಇದುವರೆಗೂ ಯಾವುದೇ ಹಣಕಾಸಿನ ನೆರವನ್ನು ನೀಡಿರುವುದಿಲ್ಲ. ಅಲ್ಲದೇ 2ನೇ ಅರ್ಜಿದಾರರ ಮಗುವಾದ ಅಕ್ಷಯ್ 5ನೇ ತರಗತಿಯನ್ನು ಮತ್ತು 3ನೇ ಅರ್ಜಿದಾರಾದ ಐಶ್ವರ್ಯ 1ನೇ ತರಗತಿಯನ್ನು ಕೋಡಿಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಸದರಿ ವಿದ್ಯಾಭ್ಯಾಸದ ಖರ್ಚನ್ನು ಎದುರುದಾರರು ಇದುವರೆಗೂ ಮಾಡಿರುವುದಿಲ್ಲ. ಅರ್ಜಿದಾರರು ಈಗ ತಾತ್ಕಾಲಿಕವಾಗಿ ತಮ್ಮ ತವರು ಮನೆಯಲ್ಲಿ ವಾಸವಿದ್ದು, ಇನ್ನು ಮುಂದೆ ಅರ್ಜಿದಾರರು ತಮ್ಮ ತವರು ಮನೆಯಲ್ಲಿ ವಾಸವಾಗಿರಲು ಅವಕಾಶವಿರುವುದಿಲ್ಲ. ಎದುರುದಾರರು ಈ ಎಲ್ಲಾ ದುಷ್ಕೃತ್ಯಗಳಿಂದ ಅರ್ಜಿದಾರರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿರುತ್ತದೆ. ಅರ್ಜಿದಾರರು ಸ್ವಂತ ದುಡಿಮೆ ಮಾಡಿ ಜೀವನ ನಡೆಸುವುದು ಮತ್ತು ತಮ್ಮ ಮಕ್ಕಳಾದ 2 ಮತ್ತು 3ನೇ ಅರ್ಜಿದಾರರನ್ನು ಸಾಕುವುದು ಕಷ್ಟಕರವಾಗಿರುತ್ತದೆ. ಅಲ್ಲದೇ ಅರ್ಜಿದಾರರಿಗೆ ಯಾವುದೇ ಆದಾಯದ ಮೂಲಗಳಿರುವುದಿಲ್ಲ. ಎದುರುದಾರರಿಗೆ ಕೃಷಿ ಜಮೀನು, ತೋಟ ಹೊಂದಿದ್ದು, ಸದರಿ ಜಮೀನಿನಲ್ಲಿ ತೆಂಗು, ಬಾಳೆ, ಅಡಿಕೆ, ಶುಂಠಿ, ತರಕಾರಿ ಇತರೆ ಬೆಳೆಗಳಿಂದ ಹಾಗೂ ಹೈನುಗಾರಿಕೆ ವೃತ್ತಿಯಿಂದ ತಿಂಗಳಿಗೆ ಒಟ್ಟು ರೂ.1,00,000-00 ಆದಾಯ ಹೊಂದಿರುತ್ತಾರೆ. ಅರ್ಜಿದಾರಳಿಗೆ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟಕರವಾಗಿದ್ದು ,ಸ್ವಂತ ದುಡಿಮೆ ಮಾಡಿ ಜೀವನ ನಡೆಸುವುದು ಕಷ್ಟಕರವಾಗಿರುತ್ತದೆ. ಅರ್ಜಿದಾರಳ ಊಟ , ಬಟ್ಟೆ , ವಸತಿ , ಹಾಗೂ ಜೀವನ ನಿರ್ವಹಣೆಗೆ ಆದಾಯ ಮೂಲಗಳಿಲ್ಲದೇ ತುಂಬಾ ಕಷ್ಟಕರ ಜೀವನ ನಡೆಸುತ್ತಿದ್ದು ತಮ್ಮ ಜೀವನ ನಿರ್ವಹಣೆಗೆ ತಿಂಗಳಿಗೆ ರೂ.50,000-00 ಎದುರುದಾರರಿಂದ ಜೀವನಾಂಶ ಪಡೆಯಲು ಅರ್ಹರಿರುವುದಾಗಿಯೂ, ಆದುದರಿಂದ

ಅರ್ಜಿದಾರಳು ಕೇಳಿದಂತೆ ಜೀವನ ನಿರ್ವಹಣೆ ಭತ್ಯೆಯನ್ನು ಎದುರುದಾರನಿಂದ ಕೊಡಿಸಿಕೊಡುವಂತೆ ಕೋರಿರುತ್ತಾರೆ.

4. ಅರ್ಜಿದಾರರು ಮುಂದುವರೆದು ತನ್ನ ಅರ್ಜಿಯಲ್ಲಿ ಹೇಳುವುದೇನೆಂದರೆ, ಹಾಗೆಯೇ ಎದುರುದಾರರು ಅರ್ಜಿದಾರರು ವಾಸವಾಗಿರುವ ತಮ್ಮ ತವರು ಮನೆಯ ಹತ್ತಿರ ಬಂದು ನ್ಯಾಯಾಲಯದಲ್ಲಿ ಕೇಸು ಹಾಕಿದರೂ ನನ್ನಿಂದ ಒಂದು ರೂಪಾಯಿ ಜೀವನಾಂಶ ಹಣ ಕಟ್ಟಿಸಲು ಸಾಧ್ಯವಿಲ್ಲವೆಂದು, ನಾನು ಹೊಸದಾಗಿ ಬೈಕ್ ತಂದಿದ್ದೇನೆಂದು, ಹೆಚ್ಚು ಮಾತನಾಡಿದರೆ ಈ ಬೈಕ್‌ನ್ನು ನಿಮಗೆ ಡಿಕ್ಕಿ ಮಾಡಿ ಕೊಲೆ ಮಾಡುತ್ತೇನೆ, ನನ್ನನ್ನು ನೀವು ಏನು ಮಾಡಲು ಆಗುವುದಿಲ್ಲವೆಂದು ಅರ್ಜಿದಾರರಿಗೆ ಮತ್ತು ಅವರ ತಂದೆ-ತಾಯಿ ಹಾಗೂ ಸಹೋದರನಿಗೆ ಹಿಂಸೆ-ಕಿರುಕುಳದ ದೌರ್ಜನ್ಯ ನೀಡುತ್ತಾ, ಗಲಾಟೆ ಮಾಡುತ್ತಾ, ತೊಂದರೆ ನೀಡುತ್ತಿದ್ದು, ಅರ್ಜಿದಾರರು ನೆಮ್ಮದಿಯಿಂದ ಜೀವನ ನಡೆಸುವುದು ತುಂಬಾ ಕಷ್ಟಕರವಾಗಿರುತ್ತದೆ. ಆದ್ದರಿಂದ ಅರ್ಜಿದಾರರು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕಲಂ 18 (ಎಬಿಸಿ) ರಡಿ ಸಲ್ಲಿಸಿದ್ದು, ಎದುರುದಾರನು ಅರ್ಜಿದಾರರಿಗೆ ಮತ್ತು ಸಹೋದರನಿಗೆ ಯಾವುದೇ ರೀತಿಯಿಂದಲೂ ಹಿಂಸೆ-ಕಿರುಕುಳ, ದೌರ್ಜನ್ಯ ನೀಡದಂತೆ, ಗಲಾಟೆ ಮಾಡದಂತೆ ಅರ್ಜಿದಾರಿಗೆ ಹಳೇಬೀಡು ಪೋಲೀಸರು ರಕ್ಷಣೆ ನೀಡುವಂತೆ ರಕ್ಷಣಾ ಆದೇಶ ಮಾಡಬೇಕಾಗಿ ಕೋರಿಕೊಂಡಿರುತ್ತಾರೆ.

5. ಪ್ರಸ್ತುತ ಪ್ರಕರಣದಲ್ಲಿ ಎದುರುದಾರನು ತನ್ನ ವಕೀಲರ ಮೂಲಕ ಹಾಜರಾಗಿ ವಿವರವಾದ ತಕರಾರನ್ನು ಸಲ್ಲಿಸಿ ಅರ್ಜಿದಾರರು ಹೇಳಿರುವ ಎಲ್ಲಾ ಅಂಶಗಳನ್ನು ಅಲ್ಲಗೆಳೆಯುತ್ತಾ ಹೇಳುವುದೇನೆಂದರೆ, ಅರ್ಜಿದಾರರು ಮತ್ತು ಎದುರುದಾರರು ಬೆಂಗಳೂರಿನಲ್ಲಿ ಈಗ್ಗೆ ಸುಮಾರು 1 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿರುತ್ತಾರೆ. ಅರ್ಜಿದಾರರು ವಾಸವಾಗಿರುವ ಸ್ಥಳ, ವಿಳಾಸ, ಎದುರುದಾರಿಗೆ ತಿಳಿದಿರುವುದಿಲ್ಲ, ಎದುರುದಾರರು ವಾಸವಾಗಿರುವ ಸ್ಥಳ ಅರ್ಜಿದಾರರಿಗೆ ತಿಳಿದಿರುವುದಿಲ್ಲ, ಅರ್ಜಿದಾರರಿಗೆ ಆರೋಗ್ಯ ಸರಿ ಇಲ್ಲದೆ ಇದ್ದುದ್ದರಿಂದ ಅವರ

ಸಂಬಂಧಿಕರ ಮನೆಯಲ್ಲಿ ವಾಸವಾಗಿರುತ್ತಾರೆ. ಅರ್ಜಿದಾರರು ಈಗಲೂ ಸಹ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯ ಇಲ್ಲದೆ ಇದ್ದರೂ ಸಹ ಅನಾವಶ್ಯಕವಾಗಿ ಎದುರುದಾರರಿಗೆ ತೊಂದರೆಯನ್ನು ಕೊಡಲು ಅರ್ಜಿಯನ್ನು ದಾಖಲಿಸಿರುತ್ತಾರೆ. ಅಲ್ಲದೇ ಅರ್ಜಿದಾರರು 2018 ರಿಂದಲೂ ಪ್ರತ್ಯೇಕ ವಾಸವಾಗಿರುವುದರಿಂದ ಕೌಟುಂಬಿಕ ದೌರ್ಜನ್ಯ ನಿಷೇಧ ಕಾಯ್ದೆಯ ರೀತ್ಯಾ ಅರ್ಜಿಯನ್ನು ದಾಖಲಿಸಲು ಬರುವುದಿಲ್ಲ. ಇತ್ತೀಚಿಗೆ ಎದುರುದಾರರು ಊರಿಗೆ ತಂದೆ-ತಾಯಿಯನ್ನು ನೋಡಲು ಬಂದಾಗ ಅರ್ಜಿದಾರರ ಸಹೋದರರು ಎದುರುದಾರನಿಗೆ ಹಲ್ಲೆ ಮಾಡಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ ಎದುರುದಾರರು ಆಸ್ಪತ್ರೆಗೆ ದಾಖಲಾಗಿದ್ದು, ಎಂಎಲ್‌ಸಿ ಆಗಿರುತ್ತದೆ. ನಂತರ ಹಳೇಬೀಡು ಠಾಣೆಗೆ ದೂರು ಕೊಡಲಾಗಿ ಸದರಿ ಪೋಲೀಸರು ಎನ್‌ಸಿಆರ್ ಮಾಡಿದ್ದು, ಮುಚ್ಚಳಿಕೆಯನ್ನು ಬರೆಯಿಸಿಕೊಂಡು ಕಳುಹಿಸಿದ್ದು, ಲಘು ಪ್ರಕರಣ ಕೇಸನ್ನು ಸಹ ಅರ್ಜಿದಾರರ ಸಹೋದರರ ವಿರುದ್ಧ ದಾಖಲು ಮಾಡಿರುತ್ತಾರೆ. ಆದ್ದರಿಂದ ಅರ್ಜಿದಾರರು ಮೇಲೆ ಕೇಳಿದ ಪರಿಹಾರವನ್ನು ಪಡೆಯಲು ಅರ್ಹರಿರುವುದಿಲ್ಲ, ಆದ್ದರಿಂದ ಸದರಿ ಮಧ್ಯಂತರ ಅರ್ಜಿಗಳನ್ನು ವಜಾ ಮಾಡಬೇಕಾಗಿ ಕೋರಿರುತ್ತಾರೆ.

6. ಈ ಅರ್ಜಿಗಳಲ್ಲಿನ ವಿಷಯಗಳು ಮತ್ತು ಎದುರುದಾರನ ತಕರಾರನ್ನು ಜೊತೆಗೆ ಲಭ್ಯವಿರುವ ದಾಖಲೆಗಳನ್ವಯ ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವವಾಗುತ್ತವೆ:-

1. ಎದುರುದಾರನು ಸಾಕಷ್ಟು ಆದಾಯವನ್ನು ಹೊಂದಿದ್ದರೂ ಸಹ ಅರ್ಜಿದಾರಳ ಜೀವನ ನಿರ್ವಹಣೆಯನ್ನು ನೋಡಿಕೊಳ್ಳದೇ ಮತ್ತು ಅವರಿಗೆ ಜೀವನಾಂಶವನ್ನು ನೀಡದೇ ನಿರ್ಲಕ್ಷಿಸಿರುವನೇ ಎಂಬುದನ್ನು ಹಾಗೂ ಅರ್ಜಿದಾರರು ವಾಸವಿರುವ ಸ್ಥಳಕ್ಕೆ ಎದುರುದಾರನು ಬಂದು ಹಿಂಸೆ-ಕಿರುಕುಳ, ದೌರ್ಜನ್ಯ ನೀಡಿ, ಗಲಾಟೆ ಮಾಡುತ್ತಿರುವುದಾಗಿ ಅರ್ಜಿದಾರಳು ಮೇಲ್ನೋಟಕ್ಕೆ ತೋರಿಸುತ್ತಾರೆಯೇ ?

2. ಯಾವ ಆದೇಶ ?

7. ಮೇಲ್ಕಂಡ ಅಂಶಗಳಿಗೆ ನಾನು ಈ ಕೆಳಕಂಡಂತೆ ನಿರ್ಣಯಿಸಿರುತ್ತೇನೆಃ-

ಅಂಶ-1 ಃ- ಭಾಗಶಃ ಸಕಾರಾತ್ಮಕವಾಗಿ

ಅಂಶ-2 ಃ- ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿ ಃ-

ಃಃ ಕಾರಣಗಳು ಃಃ

ಅಂಶ ಸಂಖ್ಯೆಃ 1ಃ-

8. 1ನೇ ಅರ್ಜಿದಾರು ಮತ್ತು ಎದುರುದಾರನ ವಿವಾಹವು ದಿನಾಂಕಃ 21-12-2007 ರಂದು ಅರಸೀಕೆರೆ ತಾಲ್ಲೂಕು, ಚಿಕ್ಕತಿರುಪತಿಯ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ಗುರು-ಹಿರಿಯರ ಸಮ್ಮುಖದಲ್ಲಿ ನೆರವೇರಿರುತ್ತದೆ. ವಿವಾಹದ ನಂತರ 1ನೇ ಅರ್ಜಿದಾರರು ಎದುರುದಾರನೊಂದಿಗೆ ದೊಡ್ಡಕೋಡಿಹಳ್ಳಿ ಗ್ರಾಮದ ಎದುರುದಾರರ ಮನೆಯಲ್ಲಿ ದಾಂಪತ್ಯ ಜೀವನ ನಡೆಸಿದ್ದು, ನಂತರ ಎದುರುದಾರರು ಬೇಕರಿ ವೃತ್ತಿ ಮಾಡುತ್ತಿದ್ದ ಬೆಳಗಾಂ ನಗರಕ್ಕೆ 1ನೇ ಅರ್ಜಿದಾರರನ್ನು ಕರೆದುಕೊಂಡು ಹೋಗಿ 6 ತಿಂಗಳು ದಾಂಪತ್ಯ ಜೀವನ ನಡೆಸಿ, ನಂತರ ಪುನಃ ದೊಡ್ಡಕೋಡಿಹಳ್ಳಿ ಗ್ರಾಮದ ಮನೆಗೆ ಕರೆದುಕೊಂಡು ಬಂದು ಸುಮಾರು 6 ವರ್ಷಗಳ ಕಾಲ ದಾಂಪತ್ಯ ಜೀವನ ನಡೆಸಿದ್ದು, ಸದರಿ 1ನೇ ಅರ್ಜಿದಾರರ ಮತ್ತು ಎದುರುದಾರರ ದಾಂಪತ್ಯ ಫಲವಾಗಿ 2 ಮತ್ತು 3ನೇ ಅರ್ಜಿದಾರರು ಜನಿಸಿರುತ್ತಾರೆಂದು ಅರ್ಜಿದಾರರು ತನ್ನ ಅರ್ಜಿಯಲ್ಲಿ ಹೇಳಿರುತ್ತಾರೆ. ಸದರಿ ಅಂಶವನ್ನು ಮೇಲ್ನೋಟಕ್ಕೆ ತೋರಿಸುವ ಸಲುವಾಗಿ ವಿವಾಹಕ್ಕೆ ಸಂಬಂಧಿಸಿದಂತೆ ಫೋಟೋವನ್ನು ಹಾಗೂ 2 ಮತ್ತು 3ನೇ ಅರ್ಜಿದಾರರು 1ನೇ ಅರ್ಜಿದಾರರು ಮತ್ತು ಎದುರುದಾರರ ದಾಂಪತ್ಯ ಫಲವಾಗಿ ಜನಿಸಿರುವ ಬಗ್ಗೆ 2 ಮತ್ತು 3ನೇ ಅರ್ಜಿದಾರರ ಫೋಟೋವನ್ನು ಸಹ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಅಲ್ಲದೇ ಅರ್ಜಿದಾರರು ಹಾಜರುಪಡಿಸಿರುವ 2 ಮತ್ತು 3ನೇ ಅರ್ಜಿದಾರರ ಶಾಲಾ ದಾಖಲಾತಿಗಳಲ್ಲಿಯೂ ಸಹ 2 ಮತ್ತು 3ನೇ ಅರ್ಜಿದಾರರ ತಂದೆ ಹೆಸರು ಶ್ರೀನಾಥ ಎಂದು ನಮೂದಾಗಿರುತ್ತದೆ. ಇದ್ದರಿಂದ 1ನೇ ಅರ್ಜಿದಾರರು ಎದುರುದಾರನ ಕಾನೂನು ಬದ್ಧ ಪತ್ನಿ ಹಾಗೂ 2 ಮತ್ತು 3ನೇ

ಅರ್ಜಿದಾರರು ಎದುರುದಾರನ ಮಕ್ಕಳು ಎನ್ನುವುದರಲ್ಲಿ ಯಾವುದೇ ಸಂದೇಹ ಇರುವುದಿಲ್ಲ.

9. ಹೀಗಿರುವಾಗ ಅರ್ಜಿದಾರರು ತನ್ನ ಅರ್ಜಿಯಲ್ಲಿ ಎದುರುದಾರನು ಮದ್ಯಪಾನ, ಅನೈತಿಕ ಸಂಬಂಧ ಇತ್ಯಾದಿ ದುಷ್ಚಟಗಳಿಗೆ ಬಲಿಯಾಗಿ 1ನೇ ಅರ್ಜಿದಾರರಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ, ಕಿರುಕುಳ ಕೊಡಲಾರಂಭಿಸಿರುತ್ತಾರೆ. ಅಲ್ಲದೇ ಎದುರುದಾರರು 1ನೇ ಅರ್ಜಿದಾರರ ಮತ್ತು ತಮ್ಮ ಇಬ್ಬರು ಮಕ್ಕಳಾದ 2 ಮತ್ತು 3ನೇ ಅರ್ಜಿದಾರರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳದೇ ತಾತ್ಸಾರ-ನಿರ್ಲಕ್ಷ್ಯ ಮಾಡಿ, ಅರ್ಜಿದಾರರಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ-ಕಿರುಕುಳ ನೀಡಿ ದೌರ್ಜನ್ಯವೆಸಗಿ ಅರ್ಜಿದಾರರನ್ನು ಮತ್ತು ಮಕ್ಕಳನ್ನು ಈಗ್ಗೆ 2 ವರ್ಷಗಳ ಹಿಂದೆ ಹೊರಹಾಕಿರುತ್ತಾರೆಂದು ಹೇಳಿರುತ್ತಾರೆ. ಹೀಗಿರುವಾಗ ಎದುರುದಾರನು ತನ್ನ ತಕರಾರು ಸಲ್ಲಿಸಿರುವ ಸಮಯದಲ್ಲಿ ಅರ್ಜಿದಾರರು ಸುಮಾರು 2 ವರ್ಷಗಳಿಂದ ಪ್ರತ್ಯೇಕ ವಾಸವಾಗಿರುವುದಾಗಿ ಒಪ್ಪಿಕೊಂಡಿರುತ್ತಾರೆ. ಹೀಗೆ ಒಪ್ಪಿಕೊಂಡಿರುವ ಅರ್ಥವೇನೆಂದರೆ ಅರ್ಜಿದಾರರಿಗೆ ಎದುರುದಾರನು ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿ ಅರ್ಜಿದಾರರನ್ನು ಮನೆಯಿಂದ ಹೊರ ಹಾಕಿರುವುದಾಗಿ ಅರ್ಥೈಸಬಹುದಾಗಿರುತ್ತದೆ. ಇದರಿಂದ ಎದುರುದಾರರು ಅರ್ಜಿದಾರರ ಗಂಡಃತಂದೆಯಾದ ಕಾರಣ ಅವರ ಪಾಲನೆ-ಪೋಷಣೆ, ಯೋಗಕ್ಷೇಮ, ವಿದ್ಯಾಭ್ಯಾಸ ಔಷಧೋಪಚಾರ ವೆಚ್ಚ ಇತ್ಯಾಗಳ ಯಾವುದೇ ಕರ್ತವ್ಯ ನಿರ್ವಹಿಸದೇ ನಿರ್ಲಕ್ಷಿಸಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

10. ಹೀಗಿರುವಾಗ ಅರ್ಜಿದಾರರು ಮುಂದುವರೆದು ತನ್ನ ಅರ್ಜಿಯಲ್ಲಿ ಹೇಳುವುದೇನೆಂದರೆ, 1ನೇ ಅರ್ಜಿದಾರರ ಮತ್ತು ಎದುರುದಾರರ ಮಗುವಾದ 3ನೇ ಅರ್ಜಿದಾರರು ಐಶ್ವರ್ಯಳಿಗೆ ಹುಟ್ಟಿನಿಂದಲೂ THASASSEMIA MAJOR ಎಂಬ ಗುರುತರವಾದ ಕಾಯಿಲೆ ಇದ್ದು, ಸದರಿ 3ನೇ ಅರ್ಜಿದಾರಳಾದ ಐಶ್ವರ್ಯಳಿಗೆ ಪ್ರತಿ 20 ದಿನಗಳಿಗೊಮ್ಮೆ ರಕ್ತ ಬದಲಾವಣೆ ಮಾಡಲೇಬೇಕಾಗಿದ್ದು, ಸದರಿ ಕಾಯಿಲೆಯ ಚಿಕಿತ್ಸೆಯನ್ನು ಬೆಂಗಳೂರು INDIRA GANDHI INSTITUTE OF CHILD HEALTH

ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಬೇಕಿದ್ದು, ಸದರಿ ಚಿಕಿತ್ಸೆಗಾಗಿ ಪ್ರತಿ ವರ್ಷಕ್ಕೆ ರೂ.27,000-00 ಖರ್ಚಾಗುತ್ತಿರುತ್ತದೆ. ಅಲ್ಲದೇ ಸದರಿ ಚಿಕಿತ್ಸೆಗಾಗಿ ಸುಮಾರು 10 ರಿಂದಾ 12 ಲಕ್ಷ ರೂ.ಗಳ ಅವಶ್ಯಕತೆ ಇರುತ್ತದೆ ಎಂದು ವೈದ್ಯರು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ಮಗುವಿನ ಚಿಕಿತ್ಸೆಗಾಗಿ ಎದುರುದಾರರು ಇದುವರೆಗೂ ಯಾವುದೇ ಹಣಕಾಸಿನ ನೆರವನ್ನು ನೀಡಿರುವುದಿಲ್ಲ ಹೇಳಿರುತ್ತಾರೆ. ಸದರಿ ಐಶ್ವರ್ಯಗಳಿಗೆ THASASSEMIA MAJOR ಎಂಬ ಕಾಯಿಲೆ ಇರುವುದನ್ನು ತೋರಿಸುವ ಸಲುವಾಗಿ ಅರ್ಜಿದಾರರು INDIRA GANDHI INSTITUTE OF CHILD HEALTH ಆಸ್ಪತ್ರೆಯವರು ನೀಡಿರುವ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಇದರಿಂದ ಸದರಿ ಐಶ್ವರ್ಯ ಅಂದರೆ 3ನೇ ಅರ್ಜಿದಾರರು THASASSEMIA MAJOR ಎಂಬ ಕಾಯಿಲೆಯಿಂದ ಬಳಲುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ಅಂಶವನ್ನು ಎದುರುದಾರನು ತನ್ನ ತಕರಾರಿನಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

11. ಹೀಗಿರುವಾಗ ಅರ್ಜಿದಾರರು ಮುಂದುವರೆದು ತನ್ನ ಅರ್ಜಿಯಲ್ಲಿ 2ನೇ ಅರ್ಜಿದಾರರ ಮಗುವಾದ ಅಕ್ಷಯ್ 5ನೇ ತರಗತಿಯನ್ನು ಮತ್ತು 3ನೇ ಅರ್ಜಿದಾರಾದ ಐಶ್ವರ್ಯ 1ನೇ ತರಗತಿಯನ್ನು ಕೋಡಿಹಳ್ಳಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ಸದರಿ ವಿದ್ಯಾಭ್ಯಾಸದ ಖರ್ಚನ್ನು ಎದುರುದಾರರು ಇದುವರೆಗೂ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಅದಕ್ಕೆ ಪೂರಕವಾಗಿ ಅರ್ಜಿದಾರರನು ನ್ಯಾಯಾಲಯದ ಮುಂದೆ 2 ಮತ್ತು 3ನೇ ಅರ್ಜಿದಾರರ ಶಾಲಾ ವ್ಯಾಸಾಂಗ ದೃಢೀಕರಣ ಪತ್ರವನ್ನು ಸಹ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ಹೀಗಿರುವಾಗ ಮುಂದುವರೆದು ಅರ್ಜಿದಾರರು ಈಗ ತಾತ್ಕಾಲಿಕವಾಗಿ ತಮ್ಮ ತವರು ಮನೆಯಲ್ಲಿ ವಾಸವಿರುವುದಾಗಿ ಹೇಳಿರುತ್ತಾರೆ. ಆದರೆ ಸದರಿ ಅಂಶವನ್ನು ತನ್ನ ತಕರಾರಿನಲ್ಲಿ ಅಲ್ಲಗೆಳೆಯುತ್ತಾ, ಪ್ರಸ್ತುತ 1 ವರ್ಷದಿಂದ ಅರ್ಜಿದಾರರು ಬೆಂಗಳೂರಿನಲ್ಲಿ ತನ್ನಿಂದ ಪ್ರತ್ಯೇಕವಾಗಿ ವಾಸವಾಗಿರುವುದಾಗಿ ಹೇಳಿರುತ್ತಾರೆ. ಆದರೆ ಅದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಪ್ರಸ್ತುತ

ಅರ್ಜಿದಾರರು 1ನೇ ಅರ್ಜಿದಾರರ ತವರು ಮನೆಯಲ್ಲಿ ವಾಸವಿರುವುದಾಗಿ ಹೇಳಬಹುದಾಗಿದೆ.

12. ಮುಂದುವರೆದು ಅರ್ಜಿದಾರರು ತನ್ನ ಅರ್ಜಿಯಲ್ಲಿ ಎದುರುದಾರರು ದುಷ್ಕೃತ್ಯಗಳಿಂದ ಅರ್ಜಿದಾರರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿರುತ್ತದೆ. ಅರ್ಜಿದಾರರು ಸ್ವಂತ ದುಡಿಮೆ ಮಾಡಿ ಜೀವನ ನಡೆಸುವುದು ಮತ್ತು ತಮ್ಮ ಮಕ್ಕಳಾದ 2 ಮತ್ತು 3ನೇ ಅರ್ಜಿದಾರರನ್ನು ಸಾಕುವುದು ಕಷ್ಟಕರವಾಗಿರುತ್ತದೆ. ಅಲ್ಲದೇ ಅರ್ಜಿದಾರರಿಗೆ ಯಾವುದೇ ಆದಾಯದ ಮೂಲಗಳಿರುವುದಿಲ್ಲ. ಎದುರುದಾರರಿಗೆ ಕೃಷಿ ಜಮೀನು, ತೋಟ ಹೊಂದಿದ್ದು, ಸದರಿ ಜಮೀನಿನಲ್ಲಿ ತೆಂಗು, ಬಾಳೆ, ಅಡಿಕೆ, ಶುಂಠಿ, ತರಕಾರಿ ಇತರೆ ಬೆಳೆಗಳಿಂದ ಹಾಗೂ ಹೈನುಗಾರಿಕೆ ವೃತ್ತಿಯಿಂದ ತಿಂಗಳಿಗೆ ಒಟ್ಟು ರೂ.1,00,000-00 ಆದಾಯ ಹೊಂದಿರುತ್ತಾರೆಂದು ಹೇಳಿರುತ್ತಾರೆ. ಅಲ್ಲದೇ ಅರ್ಜಿದಾರರು ಎದುರುದಾರನ ತಂದೆಯ ಹೆಸರಿನಲ್ಲಿ ಇರುವ ಜಮೀನಿಗ ಸಂಬಂಧಿಸಿದಂತೆ ಪಹಣಿಯನ್ನು ಸಹ ಹಾಜರುಪಡಿಸಿರುತ್ತಾರೆ. ಹೀಗಿರುವಾಗ ಈಗಾಗಲೇ ಮೇಲೆ ಹೇಳಿದಂತೆ ಎದುರುದಾರರು ಅರ್ಜಿದಾರರಿಗೆ ಕೌಟುಂಬಿಕ ದೌರ್ಜನ್ಯ ನೀಡಿ, ಮನೆಯಿಂದ ಹೊರ ಹಾಕಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಅಲ್ಲದೇ 2 ಮತ್ತು 3ನೇ ಅರ್ಜಿದಾರರು ವಿದ್ಯಾಭ್ಯಾಸ ಮಾಡುತ್ತಿದ್ದು, 3ನೇ ಅರ್ಜಿದಾರಳು THASASSEMIA MAJOR ಎಂಬ ಕಾಯಿಲೆ ಬಳಲುತ್ತಿರುವುದಾಗಿ ಸಹ ಅರ್ಜಿದಾರರು ದಾಖಲೆಗಳ ಮೂಲಕ ನ್ಯಾಯಾಲಯಕ್ಕೆ ಮೇಲ್ನೋಟಕ್ಕೆ ತೋರಿಸಲು ಸಫಲರಾಗಿರುತ್ತಾರೆ. ಅಲ್ಲದೇ ಅರ್ಜಿದಾರರಿಗೆ ಯಾವುದೇ ಆದಾಯದ ಮೂಲಗಳಿರುವುದಿಲ್ಲ. ಹೀಗಿರುವಾಗ ಎದುರುದಾರರು 1ನೇ ಅರ್ಜಿದಾರರನ್ನು ವಿವಾಹವಾದ ನಂತರ 1ನೇ ಅರ್ಜಿದಾರರನ್ನು ನೋಡಿಕೊಳ್ಳುವ ಜವಾಬ್ದಾರಿ ಎದುರುದಾರನ ಮೇಲೆ ಇರುತ್ತದೆ. ಹಾಗೆಯೇ ತನ್ನ ಮಕ್ಕಳಾದ 2 ಮತ್ತು 3ನೇ ಅರ್ಜಿದಾರರ ಯೋಗಕ್ಷೇಮ ಮತ್ತು ವಿದ್ಯಾಭಾಸದ ಖರ್ಚನ್ನು ಎದುರುದಾರನು ನೋಡಿಕೊಳ್ಳಲು ಸಹ ಅವಶ್ಯಕವಾಗಿರುತ್ತದೆ. ಹೀಗಿರುವಾಗ ಎದುರುದಾರನಿಗೆ ಜಮೀನು ಇದೆ ಎಂದು ತೋರಿಸಲು ಅರ್ಜಿದಾರರು ನ್ಯಾಯಾಲಯದ ಮುಂದೆ ಅರ್ಜಿದಾರರ ತಂದೆಯ ಹೆಸರಿಗೆ ಇರುವ ಜಮೀನಿನ ಪಹಣಿ ಪತ್ರಿಕೆಯನ್ನು

ಹಾಜರುಪಡಿಸಿರುತ್ತಾರೆ. ಸದರಿ ಪಹಣಿ ಪತ್ರಿಕೆಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಸದರಿ ಜಮೀನು ಅರ್ಜಿದಾರರ ತಂದೆ ಹೆಸರಿಗೆ ದರಖಾಸ್ತು ಮೂಲಕ ಬಂದಿದ್ದು, ಸದರಿ ಆಸ್ತಿಯಲ್ಲಿ ಎದುರುದಾರನಿಗೂ ಸಹ ಹಕ್ಕು ಇರುವುದರಿಂದ ಹಾಗೂ ಸದರಿ ಆಸ್ತಿಯಲ್ಲಿ ತೆಂಗು ಬೆಳೆ ಬೆಳೆದಿರುವುದರಿಂದ ಇಂತಿಷ್ಟು ಆದಾಯ ಇದೆ ಎಂಬುದಾಗಿ ಪೂರ್ವಭಾವನೆ ತಳೆಯಬಹುದಾಗಿದೆ. ಆದರೆ , ಅರ್ಜಿದಾರರು ಎದುರುದಾರನಿಗೆ ತಿಂಗಳಿಗೆ ವ್ಯವಸಾಯ ಮತ್ತು ಹೈನುಗಾರಿಕೆಯಿಂದ ತಿಂಗಳಿಗೆ ರೂ.1,00,000-00 ಆದಾಯ ಇದೆ ಎಂಬುದಾಗಿ ತಮ್ಮ ಅರ್ಜಿಯಲ್ಲಿ ತಿಳಿಸಿದ್ದರೂ ಸಹ ಸದರಿ ಅಂಶವನ್ನು ರುಜುವಾತುಪಡಿಸುವ ಸಲುವಾಗಿ ಅರ್ಜಿದಾರರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ ಸ್ಥಿರಾಸ್ಥಿಗಳು ಇರುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. 1ನೇ ಅರ್ಜಿದಾರರು ಒಬ್ಬ ಮಹಿಳೆಯಾಗಿದ್ದು ಅವರು ಸ್ವಂತ ದುಡಿದು ಜೀವನ ನಿರ್ವಹಣೆ ಮಾಡುವ ಶಕ್ತಿಯನ್ನು ಹೊಂದಿರುವುದಿಲ್ಲ. ಅಲ್ಲದೇ 2 ಮತ್ತು 3ನೇ ಅರ್ಜಿದಾರರು ಅಪ್ರಾಪ್ತ ವಯಸ್ಕರಾಗಿರುವ ಕಾರಣ ಎದುರುದಾರರು ಅರ್ಜಿದಾರರನ್ನು ಸಾಕಿ ಸಲುಹುವ ಹೊಣೆಗಾರಿಕೆ ಅವರ ಮೇಲೆ ಇರುತ್ತದೆ ಎದುರುದಾರನು ಅರ್ಜಿದಾರರನ್ನು ನಿರ್ಲಕ್ಷಿಸಿದ ಕಾರಣ ಎದುರುದಾರನು ಅರ್ಜಿದಾರರಿಗೆ ಮಾಸಿಕ ಜೀವನಾಂಶ ಭತ್ಯೆ ಕೊಡಲು ಬದ್ಧನಾಗಿರುತ್ತಾರೆ. ಆದಕಾರಣ , ಸದರಿ ದಾಖಲೆಗಳನ್ನು ಮತ್ತು ಅರ್ಜಿದಾರರು ತನ್ನ ಅರ್ಜಿಯಲ್ಲಿ ಹೇಳಿರುವ ಅಂಶಗಳನ್ನು ಹಾಗೂ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಹೇಳಿದ ಅಂಶಗಳನ್ನು ಅವಲೋಕಿಸಿದಾಗ ಎದುರುದಾರನು ಅರ್ಜಿದಾರರಿಗೆ ತಿಂಗಳಿಗೆ ತಲಾ ರೂ.3,000-00 ಮಾಸಿಕ ಜೀವನಾಂಶ ಹಣವನ್ನು ನೀಡುವಂತೆ ಆದೇಶಿಸಿದ್ದಲ್ಲಿ ಎದುರುದಾರರಿಗೆ ಯಾವುದೇ ರೀತಿಯ ಭಾದಕವಾಗುವುದಿಲ್ಲ. ಆದ್ದರಿಂದ , ಎದುರುದಾರನು ಅರ್ಜಿದಾರರಿಗೆ ಮಾಸಿಕ ತಲಾ ರೂ.3,000-00ನ್ನು ಪಾವತಿಸಲು ಬದ್ದನಾಗಿರುತ್ತಾನೆ.

13. ಅಲ್ಲದೇ ಅರ್ಜಿದಾರರು ನ್ಯಾಯಾಲಯದ ಮುಂದೆ ಮತ್ತೊಂದು ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಎದುರುದಾರರು ಅರ್ಜಿದಾರರು ವಾಸವಾಗಿರುವ ತಮ್ಮ ತವರು ಮನೆಯ ಹತ್ತಿರ ಬಂದು ನ್ಯಾಯಾಲಯದಲ್ಲಿ ಕೇಸು ಹಾಕಿದರೂ

ನನ್ನಿಂದ ಒಂದು ರೂಪಾಯಿ ಜೀವನಾಂಶ ಹಣ ಕಟ್ಟಿಸಲು ಸಾಧ್ಯವಿಲ್ಲವೆಂದು, ನಾನು ಹೊಸದಾಗಿ ಬೈಕ್ ತಂದಿದ್ದೇನೆಂದು, ಹೆಚ್ಚು ಮಾತನಾಡಿದರೆ ಈ ಬೈಕ್‌ನ್ನು ನಿಮಗೆ ಡಿಕ್ಕಿ ಮಾಡಿ ಕೊಲೆ ಮಾಡುತ್ತೇನೆ, ನನ್ನನ್ನು ನೀವು ಏನು ಮಾಡಲು ಆಗುವುದಿಲ್ಲವೆಂದು ಅರ್ಜಿದಾರರಿಗೆ ಮತ್ತು ಅವರ ತಂದೆ-ತಾಯಿ ಹಾಗೂ ಸಹೋದರನಿಗೆ ಹಿಂಸೆ-ಕಿರುಕುಳದ ದೌರ್ಜನ್ಯ ನೀಡುತ್ತಾ, ಗಲಾಟೆ ಮಾಡುತ್ತಾ, ತೊಂದರೆ ನೀಡುತ್ತಿದ್ದು, ಅರ್ಜಿದಾರರು ನೆಮ್ಮದಿಯಿಂದ ಜೀವನ ನಡೆಸುವುದು ತುಂಬಾ ಕಷ್ಟಕರವಾಗಿರುತ್ತದೆ. ಆದ್ದರಿಂದ ಅರ್ಜಿದಾರರು ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಕಲಂ 18 (ಎಬಿಸಿ) ರಡಿ ಎದುರುದಾರನು ಅರ್ಜಿದಾರರಿಗೆ ಮತ್ತು ಸಹೋದರನಿಗೆ ಯಾವುದೇ ರೀತಿಯಿಂದಲೂ ಹಿಂಸೆ-ಕಿರುಕುಳ, ದೌರ್ಜನ್ಯ ನೀಡದಂತೆ, ಗಲಾಟೆ ಮಾಡದಂತೆ ಅರ್ಜಿದಾರಿಗೆ ಹಳೇಬೀಡು ಪೋಲೀಸರು ರಕ್ಷಣೆ ನೀಡುವಂತೆ ರಕ್ಷಣಾ ಆದೇಶ ಮಾಡಬೇಕಾಗಿ ಪರಿಹಾರ ಕೋರಿ ಸಲ್ಲಿಸಿರುತ್ತಾರೆ. ಆದರೆ ಎದುರುದಾರನು ಈಗಾಗಲೇ ತನ್ನ ತಕರಾರಿನಲ್ಲಿ ಅರ್ಜಿದಾರರು ಮತ್ತು ತಾನು ಬೇರೆ ಬೇರೆಯಾಗಿ ಪ್ರತ್ಯೇಕವಾಗಿ ವಾಸವಾಗಿರುವುದಾಗಿ ಒಪ್ಪಿಕೊಂಡಿರುವ ಕಾರಣ, ಅರ್ಜಿದಾರರು ತನ್ನ ಅರ್ಜಿಯಲ್ಲಿ ಹೇಳಿರುವಂತೆ ಅರ್ಜಿದಾರರು ವಾಸವಾಗಿರುವ 1ನೇ ಅರ್ಜಿದಾರರ ತವರು ಮನೆಯ ಹತ್ತಿರ ಬಂದು ಗಲಾಟೆ ಮಾಡುತ್ತಿರುವುದಾಗಿ ಊಹಿಸಬಹುದಾಗಿರುತ್ತದೆ. ಹೀಗಿರುವಾಗ ಅರ್ಜಿದಾರರಿಗೆ ರಕ್ಷಣೆಯನ್ನು ನೀಡುವ ದೃಷ್ಟಿಯಿಂದ ಎದುರುದಾರನು ಅರ್ಜಿದಾರರಿಗೆ ಮತ್ತು ಸಹೋದರನಿಗೆ ಯಾವುದೇ ರೀತಿಯಿಂದಲೂ ಹಿಂಸೆ-ಕಿರುಕುಳ, ದೌರ್ಜನ್ಯ ನೀಡದಂತೆ, ಗಲಾಟೆ ಮಾಡದಂತೆ ಅರ್ಜಿದಾರಿಗೆ ಹಳೇಬೀಡು ಪೋಲೀಸರು ರಕ್ಷಣೆ ನೀಡುವಂತೆ ಆದೇಶ ಮಾಡುವುದು ಸೂಕ್ತವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದ, ಒಂದನೇ ಅಂಶವನ್ನು " ಭಾಗಶಃ ಸಕಾರಾತ್ಮಕ " ವಾಗಿ ಉತ್ತರಿಸಿರುತ್ತೇನೆ.

ಅಂಶ ಸಂಖ್ಯೆ:2ಃ-

14. ಮೇಲ್ಕಂಡ ಅಂಶ ಸಂಖ್ಯೆ:1 ರಲ್ಲಿ ನೀಡಿರುವ ಕಾರಣಗಳ ಮೇಲೆ ಈ ಕೆಳಕಂಡಂತೆ ಆದೇಶಸುತ್ತೇನೆಃ-

**:: ಆದೇಶ ::**

**ಅರ್ಜಿದಾರರು ಎದುರುದಾರನ ವಿರುದ್ಧ ಕೌಟುಂಬಿಕ ದೌರ್ಜನ್ಯ ಕಾಯ್ದೆ ಕಲಂ. 20(1)(ಡಿ) ಹಾಗೂ ಕಲಂ 18 (ಎಬಿಸಿ) ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಗಳನ್ನು ನ್ನು ಭಾಗಶಃ ಪುರಸ್ಕರಿಸಿದೆ.**

**ಎದುರುದಾರನು, ಸದರಿ ಅರ್ಜಿ ದಾಖಲಿಸಿದ ದಿನಾಂಕದಿಂದ ಮುಖ್ಯ ಅರ್ಜಿ ತೀರ್ಮಾನವಾಗುವವರೆಗೆ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ ರೂ.3,000/-(ಮೂರು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಜೀವನಾಂಶ ಹಣವನ್ನು ನೀಡತಕ್ಕದ್ದು.**

**ಅಲ್ಲದೇ ಹಳೇಬೀಡು ಪೋಲೀಸರು ಅರ್ಜಿದಾರರು ವಾಸವಿರುವ ಸ್ಥಳಕ್ಕೆ ಎದುರುದಾರನು ಹೋಗಿ ತೊಂದರೆ ನೀಡದಂತೆ ಅರ್ಜಿದಾರರಿಗೆ ರಕ್ಷಣೆ ನೀಡಲು ಸಂಬಂಧಪಟ್ಟ ಪೋಲೀಸರಿಗೆ ಆದೇಶ ಮಾಡಲಾಗಿದೆ.**

**(ಮೇಲ್ಕಂಡ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚುಪಡಿಸಿದ ನಂತರ ತಿದ್ದುಪಡಿಯನ್ನು ಮಾಡಿ ಬಳಿಕ ತೆರೆದ ನ್ಯಾಯಾಲಯದಲ್ಲಿ ದಿನಾಂಕಃ05 ನೇ ಮಾರ್ಚ್ ಮಾಹೆ 2021 ರಂದು ಘೋಷಿಸಲಾಯಿತು)**

**(ನಾಗೇಶ ಪಿ.)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಬೇಲೂರು**

**ಪ್ರತ್ಯೇಕ ಪ್ರತಿಯ ಆದೇಶದ ಮೂಲಕ ಈ ಆದೇಶದ ಭಾಗವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತುಃ**

**ಃಆದೇಶದ ಭಾಗಃ**

**ಅರ್ಜಿದಾರರು ಎದುರುದಾರನ ವಿರುದ್ಧ ಕೌಟುಂಬಿಕ ದೌರ್ಜನ್ಯ ಕಾಯ್ದೆ ಕಲಂ. 20(1)(ಡಿ) ಹಾಗೂ ಕಲಂ 18 (ಎಬಿಸಿ) ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಗಳನ್ನು ನ್ನು ಭಾಗಶಃ ಪುರಸ್ಕರಿಸಿದೆ.**

**ಎದುರುದಾರನು, ಸದರಿ ಅರ್ಜಿ ದಾಖಲಿಸಿದ ದಿನಾಂಕದಿಂದ ಮುಖ್ಯ ಅರ್ಜಿ ತೀರ್ಮಾನವಾಗುವವರೆಗೆ ಅರ್ಜಿದಾರರಿಗೆ ಪ್ರತಿ ತಿಂಗಳು ತಲಾ ರೂ.3,000/-(ಮೂರು ಸಾವಿರ ರೂಪಾಯಿಗಳು ಮಾತ್ರ) ಗಳಂತೆ ಜೀವನಾಂಶ ಹಣವನ್ನು ನೀಡತಕ್ಕದ್ದು.**

**ಅಲ್ಲದೇ ಹಳೇಬೀಡು ಪೋಲೀಸರು ಅರ್ಜಿದಾರರು ವಾಸವಿರುವ ಸ್ಥಳಕ್ಕೆ ಎದುರುದಾರನು ಹೋಗಿ ತೊಂದರೆ ನೀಡದಂತೆ ಅರ್ಜಿದಾರರಿಗೆ ರಕ್ಷಣೆ ನೀಡಲು ಸಂಬಂಧಪಟ್ಟ ಪೋಲೀಸರಿಗೆ ಆದೇಶ ಮಾಡಲಾಗಿದೆ.**

**ಜೆಎಂಎಫ್‌ಸಿ-ಬೇಲೂರು**